ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಚುನಾವಣೆ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡಪ್ರಭ          ದಿನಾಂಕ : DATE : 15/11/2019

ಫಲಿತಾಂಶ 4 ಸ್ಥಳೀಯ ಸಂಸ್ಥೆಗಳು ಬಿಜೆಪಿಗೆ

# ನಗರ ಸ್ಥಳೀಯ ಸಂಸ್ಥೆ: ಕಾಂಗ್ರೆಸ್ ಮೇಲುಗೈ

## 418 ಕ್ಷೇತ್ರಗಳಲ್ಲಿ ಕಾಂಗ್ರೆಸ್‌ಗೆ 151, ಬಿಜೆಪಿಗೆ 125

15/11/19

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಮಂಗಳೂರು, ದಾವಣಗೆರೆ ಮಹಾನಗರ ಪಾಲಿಕೆ ಸೇರಿದಂತೆ 14 ನಗರ ಸ್ಥಳೀಯ ಸಂಸ್ಥೆಗಳಿಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ 151 ವಾರ್ಡ್, ಆಡಳಿತಾರೂಢ ಬಿಜೆಪಿ 125 ವಾರ್ಡ್ ಹಾಗೂ ಜೆಡಿಎಸ್ 63 ವಾರ್ಡ್‌ಗಳಲ್ಲಿ ಜಯ ಗಳಿಸಿವೆ.



ಬಿಜೆಪಿ ಮಂಗಳೂರು ಮಹಾನಗರ ಪಾಲಿಕೆ, ಕಂಪ್ಲಿ ಪುರಸಭೆ, ಜೋಗ ಕಾರ್ಗಲ್ ಮತ್ತು ಕುಂದಗೋಳ ಪಟ್ಟಣ ಪಂಚಾಯತಿಯಲ್ಲಿ ಸ್ಪಷ್ಟ ಬಹುಮತದೊಂದಿಗೆ ಅಧಿಕಾರ ಹಿಡಿಯಲಿದೆ. ಕಾಂಗ್ರೆಸ್ ಕನಕಪುರ ಮತ್ತು ಗೌರಿಬಿದನೂರು ಮತ್ತು ಜೆಡಿಎಸ್ ಮಾಗಡಿ ಪುರಸಭೆಯಲ್ಲಿ ಅಧಿಕಾರದ ಚುಕ್ಕಾಣಿ ಹಿಡಿಯಲಿದೆ. ದಾವಣಗೆರೆ ಮಹಾನಗರ ಪಾಲಿಕೆ ಸೇರಿದಂತೆ ಉಳಿದ ಕಡೆ ಯಾವುದೇ ಪಕ್ಷಕ್ಕೆ ಬಹುಮತ ಬಾರದ ಹಿನ್ನೆಲೆಯಲ್ಲಿ ಪಕ್ಷೇತರರ ನೆರವಿನೊಂದಿಗೆ ಅಧಿಕಾರ ಹಿಡಿಯಲು ಪ್ರಯತ್ನಗಳು ಆರಂಭವಾಗಿವೆ.

ಕನಕಪುರ ನಗರಸಭೆಯಲ್ಲಿ ಒಂದು ವಾರ್ಡ್‌ನಲ್ಲಿ ಬಿಜೆಪಿ ಗೆಲುವು ಸಾಧಿಸುವ ಮೂಲಕ ಅಲ್ಲಿ ಖಾತೆ ತೆರೆದಿದೆ. ➘13

# ನಗರ ಸ್ಥಳೀಯ ಸಂಸ್ಥೆ: ಕಾಂಗ್ರೆಸ್ ಮೇಲುಗೈ

ಕ.ಪ್ರ 15/11/19

➘ ಮೊದಲ ಪುಟದಿಂದ

ಕನಕಪುರ, ಗೌರಿಬಿದನೂರು ನಗರಸಭೆಯಲ್ಲಿ ಕಾಂಗ್ರೆಸ್ ಅಧಿಕಾರ ಹಿಡಿಯಲಿದೆ. ಆದರೆ, ಕೋಲಾರ, ಚಿಂತಾಮಣಿ, ಮುಳಬಾಗಿಲು ಕೆಜಿಎಫ್ ನಗರಸಭೆಯಲ್ಲಿ ಅತಂತ್ರ ಸ್ಥಿತಿ ನಿರ್ಮಾಣವಾಗಿದೆ.

ಕಂಪ್ಲಿ ಪುರಸಭೆ ಬಿಜೆಪಿಗೆ ದಕ್ಕಿದರೆ, ಮಾಗಡಿ ಪುರಸಭೆ ಜೆಡಿಎಸ್‌ಗೆ ಒಲಿದಿದೆ. ಆದರೆ, ಬೀರೂರು ಪುರಸಭೆ ಅತಂತ್ರವಾಗಿದೆ. ಜೋಗ ಕಾರ್ಗಲ್ ಮತ್ತು ಕುಂದಗೋಳ ಪಟ್ಟಣ ಪಂಚಾಯತಿಯು ಬಿಜೆಪಿ ಪಾಲಾಗಿದೆ. ರಾಜ್ಯದ 14 ನಗರ ಸ್ಥಳೀಯ ಸಂಸ್ಥೆಗಳ 418 ವಾರ್ಡ್‌ಗಳಿಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ 151, ಬಿಜೆಪಿ 125, ಜೆಡಿಎಸ್ 63, ಸಿಪಿಎಂ 1, ಎಸ್‌ಡಿಪಿಐ 7, ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ 2 ಮತ್ತು ಪಕ್ಷೇತರರು 55 ಮಂದಿ ಗೆಲುವು ಸಾಧಿಸಿದ್ದಾರೆ.

ಮಂಗಳೂರು ಮಹಾನಗರ ಪಾಲಿಕೆಯ 60 ವಾರ್ಡ್‌ಗಳಲ್ಲಿ 44 ವಾರ್ಡ್‌ಗಳಲ್ಲಿ ಬಿಜೆಪಿ ಗೆಲುವು ಸಾಧಿಸುವ ಮೂಲಕ ಸ್ಪಷ್ಟ ಬಹುಮತ ಪಡೆದು ಅಧಿಕಾರ ಹಿಡಿಯಲಿದೆ. ಅಧಿಕಾರದಲ್ಲಿದ್ದ ಕಾಂಗ್ರೆಸ್ ಈ ಬಾರಿ 14 ಸ್ಥಾನಗಳಿಗೆ ಕುಸಿದಿದ್ದು, ತೀವ್ರ ಮುಖಭಂಗ ಅನುಭವಿಸುವಂತಾಗಿದೆ. ಎಸ್‌ಡಿಪಿಐ ಎರಡು ಕ್ಷೇತ್ರದಲ್ಲಿ ಜಯಗಳಿಸಿದೆ. ದಾವಣಗೆರೆ ಮಹಾನಗರ ಪಾಲಿಕೆಯ 45 ಸ್ಥಾನಗಳ ಪೈಕಿ 22 ಸ್ಥಾನ ಕಾಂಗ್ರೆಸ್ ಗೆಲುವು ಸಾಧಿಸಿದೆ. ಬಿಜೆಪಿ 17 ಸ್ಥಾನದಲ್ಲಿ ಗೆಲುವು ಸಾಧಿಸಿದೆ. ಜೆಡಿಎಸ್ 1, 5 ಪಕ್ಷೇತರರು ಜಯಗಳಿಸಿದ್ದಾರೆ. ಅತಂತ್ರ ಪರಿಸ್ಥಿತಿ ನಿರ್ಮಾಣವಾಗಿರುವ ಹಿನ್ನೆಲೆಯಲ್ಲಿ ಕಾಂಗ್ರೆಸ್ ಪಕ್ಷೇತರರ ಜತೆ ಗೂಡಿ ಅಧಿಕಾರ ನಡೆಸಬಹುದಾಗಿದೆ.

ಕನಕಪುರ ನಗರಸಭೆಯಲ್ಲಿ ಮೊದಲ ಬಾರಿಗೆ ಬಿಜೆಪಿ ಖಾತೆ ತೆರೆದಿದೆ. ಒಂದು ವಾರ್ಡ್‌ನಲ್ಲಿ ಬಿಜೆಪಿ ಗೆಲುವು ಸಾಧಿಸಿದೆ. 31 ವಾರ್ಡ್‌ಗಳಲ್ಲಿ 26 ಕಾಂಗ್ರೆಸ್ ಗೆಲುವು ಸಾಧಿಸಿದೆ. ಈ ಪೈಕಿ 7 ವಾರ್ಡ್‌ಗಳಲ್ಲಿ ಅವಿರೋಧವಾಗಿ ಆಯ್ಕೆಯಾಗಿದೆ. ಬಿಜೆಪಿ 1, ಜೆಡಿಎಸ್ 4 ಸ್ಥಾನಗಳನ್ನು ಪಡೆದುಕೊಂಡಿದೆ. ಮಾಗಡಿ ಪುರಸಭೆಯ 23 ವಾರ್ಡ್‌ಗಳಲ್ಲಿ 10 ಕಾಂಗ್ರೆಸ್, 1 ಬಿಜೆಪಿ, ಜೆಡಿಸ್ 12 ಕಡೆ ಗೆಲುವು ಸಾಧಿಸಲಾಗಿದೆ. ಜೆಡಿಎಸ್ ಸರಳ ಬಹುಮತ ಪಡೆದುಕೊಂಡಿದೆ.

ಕೋಲಾರ ನಗರಸಭೆಯ 35 ವಾರ್ಡ್‌ಗಳಲ್ಲಿ 12 ಕಾಂಗ್ರೆಸ್, 3 ಬಿಜೆಪಿ, 8 ಜೆಡಿಎಸ್, 4 ಎಸ್‌ಡಿಪಿಐ, ಪಕ್ಷೇತರರು 4 ಮಂದಿ ಜಯಗಳಿಸಿದ್ದಾರೆ. ಯಾವುದೇ ಪಕ್ಷಕ್ಕೆ ಬಹುಮತ ಸಿಗದಿದ್ದು, ಕಾಂಗ್ರೆಸ್ ಅಧಿಕಾರ ಹಿಡಿಯಲು ಅವಕಾಶ ಇದೆ. ಮುಳಬಾಗಿಲು ನಗರಸಭೆಯ 31 ವಾರ್ಡ್‌ಗಳ ಪೈಕಿ 7 ಕಾಂಗ್ರೆಸ್, 2 ಬಿಜೆಪಿ, 10 ಜೆಡಿಎಸ್, 1 ಎಸ್‌ಡಿಪಿಐ, ಪಕ್ಷೇತರರು 11 ಮಂದಿ ಗೆಲುವು ಸಾಧಿಸಿದ್ದಾರೆ. ರಾಬರ್ಟ್‌ಸನ್‌ಪೇಟೆ ನಗರಸಭೆ 35 ವಾರ್ಡ್‌ಗಳಲ್ಲಿ 13 ಕಾಂಗ್ರೆಸ್, 3 ಬಿಜೆಪಿ, 2 ಜೆಡಿಎಸ್, 1 ಸಿಪಿಎಂ, 2 ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ, ಪಕ್ಷೇತರರು 14 ಮಂದಿಗೆ ವಿಜಯ ಸಾಧಿಸಿದ್ದಾರೆ. ಗೌರಿಬಿದನೂರು ನಗರಸಭೆ 31 ವಾರ್ಡ್‌ಗಳಿದ್ದು, 15 ಕಾಂಗ್ರೆಸ್, 3 ಬಿಜೆಪಿ, 6 ಜೆಡಿಎಸ್, 7 ಪಕ್ಷೇತರರು ಮತ್ತು ಚಿಂತಾಮಣಿ ನಗರಸಭೆ 31 ವಾರ್ಡ್‌ಗಳಲ್ಲಿ 1 ಕಾಂಗ್ರೆಸ್, 14 ಜೆಡಿಎಸ್, 14 ಭಾರತೀಯ ಪ್ರಜಾ ಪಕ್ಷ, 2 ಪಕ್ಷೇತರರು ಜಯಗಳಿಸಿದ್ದಾರೆ.

ಜೋಗ್ ಕಾರ್ಗಲ್ ಪಟ್ಟಣ ಪಂಚಾಯತಿ 11 ವಾರ್ಡ್‌ಗಳಲ್ಲಿ 1 ಕಾಂಗ್ರೆಸ್, 9 ಬಿಜೆಪಿ, 1 ಪಕ್ಷೇತರರು ಗೆಲುವು ಸಾಧಿಸಿದ್ದಾರೆ. ಬೀರೂರು ಪುರಸಭೆಯ 23 ವಾರ್ಡ್‌ನಲ್ಲಿ 9 ಕಾಂಗ್ರೆಸ್, 10 ಬಿಜೆಪಿ, 2 ಜೆಡಿಎಸ್, 2 ಪಕ್ಷೇತರರು ವಿಜಯ ಸಾಧಿಸಿದ್ದಾರೆ. ಕುಂದಗೋಳ ಪಟ್ಟಣ ಪಂಚಾಯತಿಯ 19 ವಾರ್ಡ್‌ಗಳಲ್ಲಿ 5 ಕಾಂಗ್ರೆಸ್, 12 ಬಿಜೆಪಿ, 2 ಪಕ್ಷೇತರರು ಗೆದ್ದಿದ್ದಾರೆ. ಕಂಪ್ಲಿ ಪುರಸಭೆಯ 23 ವಾರ್ಡ್‌ಗಳಲ್ಲಿ 10 ಕಾಂಗ್ರೆಸ್, 13 ಬಿಜೆಪಿ ಮತ್ತು ಕೊಪ್ಪಿಗೆ ಪಟ್ಟಣ ಪಂಚಾಯತಿಯ 20 ವಾರ್ಡ್‌ಗಳಲ್ಲಿ 6 ಕಾಂಗ್ರೆಸ್, 7 ಬಿಜೆಪಿ, 4 ಜೆಡಿಎಸ್, 3 ಪಕ್ಷೇತರರು ಜಯಗಳಿಸಿದ್ದಾರೆ.

5